# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು–560003

**KARNATAKA SCHOOL EXAMINATION AND ASSESSMENT BOARD**

Malleswaram, Bengaluru-560003

# ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ 2022–23

## ವಿಷಯ : ತೃತೀಯ ಭಾಷೆ – ಕನ್ನಡ

**SUBJECT: Third Language - Kannada**

**ಸಮಯ: 3 ಗಂಟೆ** — **ವಿಷಯ ಸಂಕೇತ: 62K**

**ಗರಿಷ್ಠ ಅಂಕಗಳು : 80**

**CCE-RF**

**ಶಾಲಾ ಅಭ್ಯರ್ಥಿಗಳಿಗೆ**

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : $8 \times 1 = 8$

1. ಇವುಗಳಲ್ಲಿ ಅನುಸ್ವಾರದಿಂದ ಕೂಡಿರುವ ಪದ

(ಎ) ಅಮ್ಮ

(ಬಿ) ಪುಸ್ತಕ

(ಸಿ) ಕಂಪು

(ಡಿ) ಸ್ವತಃ

2. 'ಗೊರೂರರ ಕಣ್ಣಿಗೆ ಒಬ್ಬ ಟ್ರಾಫಿಕ್ ಪೋಲೀಸಿನವ ಬಿದ್ದ' ಈ ವಾಕ್ಯದಲ್ಲಿರುವ ಅನ್ಯದೇಶ್ಯ ಪದ

(ಎ) ಟ್ರಾಫಿಕ್ ಪೋಲೀಸ್

(ಬಿ) ಕಣ್ಣಿಗೆ

(ಸಿ) ಗೊರೂರರ

(ಡಿ) ಬಿದ್ದ

3. 'ಮರವನ್ನು' ಪದವು ಈ ವಿಭಕ್ತಿಗೆ ಉದಾಹರಣೆಯಾಗಿದೆ

(ಎ) ಪ್ರಥಮಾ

(ಬಿ) ದ್ವಿತೀಯಾ

(ಸಿ) ತೃತೀಯಾ

(ಡಿ) ಚತುರ್ಥೀ

4. ಸವರ್ಣದೀರ್ಘ ಸಂಧಿಗೆ ಉದಾಹರಣೆಯಾದ ಪದ

(ಎ) ವಿದ್ಯಾಭ್ಯಾಸ

(ಬಿ) ಸದ್ಗುರು

(ಸಿ) ಮತ್ತೊಮ್ಮೆ

(ಡಿ) ಶಾಲೆಯನ್ನು

5. ಈ ಕೆಳಗಿನ ಪದಗಳಲ್ಲಿ ಅನ್ವರ್ಥಕನಾಮಕ್ಕೆ ಉದಾಹರಣೆ

(ಎ) ದೇಶ

(ಬಿ) ಕಾವೇರಿ

(ಸಿ) ಹುಡುಗ

(ಡಿ) ವೈದ್ಯ

6. 'ಮಾನ' ಈ ಪದದ ವಿರುದ್ಧಾರ್ಥಕ ರೂಪ

(ಎ) ಸನ್ಮಾನ

(ಬಿ) ಅವಮಾನ

(ಸಿ) ಹವಾಮಾನ

(ಡಿ) ಅನುಮಾನ

7. 'ಢಣಢಣ' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ

(ಎ) ದ್ವಿರುಕ್ತಿ

(ಬಿ) ಅನುಕರಣಾವ್ಯಯ

(ಸಿ) ನುಡಿಗಟ್ಟು

(ಡಿ) ಜೋಡುನುಡಿ

8. 'ಕಾವೇರಿಯ ಮುಖ ಕಮಲದಂತೆ ಅರಳಿತು' ಈ ವಾಕ್ಯದಲ್ಲಿರುವ ಅಲಂಕಾರ

(ಎ) ರೂಪಕಾಲಂಕಾರ

(ಬಿ) ಉತ್ಪ್ರೇಕ್ಷಾಲಂಕಾರ

(ಸಿ) ಉಪಮಾಲಂಕಾರ

(ಡಿ) ಶ್ಲೇಷಾಲಂಕಾರ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : $4 \times 1 = 4$

9. ಸತ್ಯವ ನುಡಿವುದೇ : ದೇವಲೋಕ :: ಮಿಥ್ಯವ ನುಡಿವುದೇ : ......................... .

10. ಅಪ್ಪರಿಲ್ಲದೆ ಸೊಪ್ಪಾದುದು : ಭೂಮಿ :: ಸಪ್ಪೆ ದಂಟಾದುದು : ......................... .

11. ಹುಲಗೂರಿನ ಸಂತ : ಖಾದರ್‌ಷಾ ವಲಿ :: ಶಿಶುನಾಳದ ಸಂತ : ......................... .

12. ಸಂಧ್ಯಾರಾಗ : ಅ.ನ. ಕೃಷ್ಣರಾಯ :: ರೂಪದರ್ಶಿ : ......................... .

**III.** ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : **4 × 1 = 4**

13. ಮೋಹನಪುರದ ಉತ್ಸಾಹೀ ತರುಣ ಯಾರು ?

14. ಡಾಂಭಿಕ ಭಕ್ತನ ಕರದಲ್ಲಿ ಏನಿದೆ ಎಂದು ಪುರಂದರದಾಸರು ಹೇಳಿದ್ದಾರೆ ?

15. ಈರಪ್ಪ ಎಂ. ಕಂಬಳಿಯವರ ಬಿಳಿಯ ಶರ್ಟು ಕೆಂಪು ಬಣ್ಣಕ್ಕೆ ತಿರುಗಿದ್ದೇಕೆ ?

16. ಪುಲಿಗೆರೆ ಸೋಮನಾಥ ಹೇಳಿರುವಂತೆ ಮಗನಾದವನಲ್ಲಿ ಇರಬೇಕಾದ ಗುಣ ಯಾವುದು ?

**IV.** ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **8 × 2 = 16**

17. ಗೊರೂರರು ಮಿನಿಪೊಲೀಸ್ ನಗರದಲ್ಲಿ ಕಾರು ಇಳಿದ ಸ್ಥಳದಿಂದ ಏಕೆ ತಪ್ಪಿಸಿಕೊಂಡರು ?

18. ಸತೀಶ ಕುಲಕರ್ಣಿಯವರು ಕಟ್ಟಬಯಸಿರುವ ನಾಡು ಹೇಗಿರುತ್ತದೆಂದು ಅಭಿವ್ಯಕ್ತಪಡಿಸಿ.

19. ಶರೀಫರ ಬಾಲ್ಯವು ಹಿಂದೂ ಪರಂಪರೆಯೊಂದಿಗೆ ಹೇಗೆ ಬೆರೆತುಹೋಗಿತ್ತು ?

20. ಶರೀಫರು ತಮ್ಮ ವೈಯಕ್ತಿಕ ಬದುಕಿನಲ್ಲಾದ ದುಃಖವನ್ನು ಹೇಗೆ ಕಡಿಮೆ ಮಾಡಿಕೊಂಡರೆಂಬುದನ್ನು ನಿಮ್ಮ ಮಾತುಗಳಲ್ಲಿ ಅಭಿವ್ಯಕ್ತಪಡಿಸಿ.

21. ಸಿ.ಪಿ.ಕೆ.ಯವರು ಗ್ರಂಥಗಳನ್ನು 'ಹಿರಿಬಾಳುಗಳ ಪಳೆಯುಳಿಕೆ' ಎಂದು ಕರೆಯಲು ಕಾರಣವೇನು ?

22. ಸ್ವಾತಿ ಮಳೆ ಸುರಿದಾಗ ರೈತನ ಸಂಭ್ರಮವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

23. ಬೆಳವಡಿ ಮಲ್ಲಮ್ಮಾಜಿ ತನ್ನ ಸ್ತ್ರೀ ಸೈನ್ಯದೊಂದಿಗೆ ಶಿವಾಜಿಯ ಸೈನಿಕರ ಮೇಲೆ ದಾಳಿ ನಡೆಸಲು ಕಾರಣವೇನು ?

24. ಧರ್ಮಪದನನ್ನು ನೋಡಿ ವಿಶುವಿನಲ್ಲಿ ಮೂಡಿದ ಭಾವನೆಗಳೇನು ?

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : 2 × 3 = 6**

25. "ಪೊಲೀಸ್‌ನವರ ಸಹವಾಸವಾದ ಮೇಲೆ ಲಾಕಪ್ ಆಗಲೇ ಬೇಕಷ್ಟೆ."

26. "ಕಣ್‌ದಿಟ್ಟ ಹರಿದತ್ತ ಗ್ರಂಥಗಿರಿ ಪಂಕ್ತಿಗಳು."

**VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4 × 3 = 12**

27. ತನ್ನ ಮಗ ದೇಶಕ್ಕಾಗಿ ಬಲಿಯಾದ ಸಂದರ್ಭದಲ್ಲಿಯೂ ರಾಮ್‌ಸಿಂಗ್‌ನ ತಾಯಿ ತೋರಿದ ದೇಶಪ್ರೇಮ ಹಾಗೂ ತ್ಯಾಗವನ್ನು ಕುರಿತು ಬರೆಯಿರಿ.

28. ಬೀಚಿ ಅವರು ಕನ್ನಡದ ದೀಕ್ಷೆ ಸ್ವೀಕರಿಸಿದ ಸಂದರ್ಭವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

29. ಅಂತರಂಗ ಮತ್ತು ಬಹಿರಂಗವನ್ನು ಹೇಗೆ ಶುದ್ಧಿಯಾಗಿಡಬಹುದೆಂದು ಬಸವಣ್ಣನವರು ವರ್ಣಿಸಿದ್ದಾರೆ ?

30. ಪುರಂದರದಾಸರ ಕೀರ್ತನೆಯಲ್ಲಿ ಡಂಭಾಚಾರದ ಭಕ್ತಿಯ ಚಿತ್ರಣವು ಹೇಗೆ ಚಿತ್ರಿತವಾಗಿದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : $2 \times 3 = 6$**

31. ಸತೀಶ ಕುಲಕರ್ಣಿ

32. ವಿಜಯಲಕ್ಷ್ಮಿ ಈಶ್ವರಪ್ಪ ಬಾಳೇಕುಂದ್ರಿ

**VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : $1 \times 3 = 3$**

33. "ಕೈ ಕೆಸರಾದರೆ ಬಾಯಿ ಮೊಸರು."

**ಅಥವಾ**

"ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ."

**IX.** ಕೆಳಗಿನ ಒಂದು ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **1 × 4 = 4**

34. ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

ಅಥವಾ

'ಕೊಡಗಿನ ಗೌರಮ್ಮನವರು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು' ಎಂಬ ಹೇಳಿಕೆಯನ್ನು ಸಮರ್ಥಿಸಿ.

**X.** ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : **1 × 4 = 4**

35. ನಾವು ನೀವು ..................................................

..................................................

..................................................

.................................................. ಇಂದೆ

ಅಥವಾ

ಕರ್ನಾಟಕ ..................................................

..................................................

..................................................

.................................................. ಒಂದೆ.

**XI.** ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : **1 × 4 = 4**

36. ಪಂಜಾಬ್ ಪ್ರಾಂತ್ಯದ 'ಬಂಗ' ಎಂಬ ಹಳ್ಳಿ ಭಗತ್‌ಸಿಂಗ್ ಹುಟ್ಟಿದ ಸ್ಥಳ. ಕ್ರಿ.ಶ. 1907 ಸೆಪ್ಟೆಂಬರ್ 23 ಈತನ ಜನ್ಮದಿನ. ತಂದೆ ಕಿಷನ್‌ಸಿಂಗ್, ತಾಯಿ ವಿದ್ಯಾವತಿ, ಕ್ರಾಂತಿಕಾರರ ಮನೆತನ.

[ Turn over

ಅವನ ತಂದೆಯೂ, ಚಿಕ್ಕಪ್ಪಂದಿರೂ ಬ್ರಿಟಿಷರ ದಬ್ಬಾಳಿಕೆಯನ್ನು ಪ್ರತಿಭಟಿಸಿ ಅನೇಕ ಸಲ ಸೆರೆಮನೆವಾಸವನ್ನು ಅನುಭವಿಸಿದ್ದರು. ಚಿಕ್ಕಂದಿನಿಂದಲೂ ಬಾಲಕ ಭಗತ್‌ಸಿಂಗ್ ಬಹಳ ಚುರುಕು. ಭಾರತಕ್ಕೆ ಸ್ವಾತಂತ್ರ್ಯ ಬರಬೇಕಿದ್ದರೆ ಸಶಸ್ತ್ರ ಕ್ರಾಂತಿಯಿಂದ ಮಾತ್ರ ಸಾಧ್ಯ ಎಂಬ ಭಾವನೆಯನ್ನು ಹೊಂದಿದ್ದನು. ಭಗತ್‌ಸಿಂಗ್‌ನ ಬಾಲ್ಯದ ನಡೆನುಡಿ ಮುಂದೆ ಅವನು ಎಂತಹ ವೀರನಾಗಬಹುದು ಎಂಬುದನ್ನು ಸೂಚಿಸುತ್ತಿದ್ದವು.

ಪ್ರಶ್ನೆಗಳು

ಎ) ಭಗತ್‌ಸಿಂಗ್ ಹುಟ್ಟಿದ ಸ್ಥಳವನ್ನು ಹೆಸರಿಸಿ.

ಬಿ) ಭಗತ್‌ಸಿಂಗ್‌ನ ಮನೆತನ ಎಂತಹದಾಗಿತ್ತು ?

ಸಿ) ಭಗತ್‌ಸಿಂಗ್‌ನ ತಂದೆ ಹಾಗೂ ಚಿಕ್ಕಪ್ಪಂದಿರು ಏಕೆ ಸೆರೆಮನೆವಾಸವನ್ನು ಅನುಭವಿಸಿದ್ದರು ?

ಡಿ) ಭಗತ್‌ಸಿಂಗ್ ಭಾರತದ ಸ್ವಾತಂತ್ರ್ಯದ ಕುರಿತು ಯಾವ ಭಾವನೆಯನ್ನು ಹೊಂದಿದ್ದನು ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 × 4 = 4**

37. ರಾಷ್ಟ್ರೀಯ ಹಬ್ಬಗಳ ಆಚರಣೆಯ ಮಹತ್ವ.

**ಅಥವಾ**

ಶಾಲೆಗಳಲ್ಲಿ ಕ್ಷೀರಭಾಗ್ಯ

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :**

**1 × 5 = 5**

38. ನಿಮ್ಮನ್ನು ಮೈಸೂರಿನ ಕುವೆಂಪು ನಗರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಚಂದನ್' ಎಂದು ಭಾವಿಸಿಕೊಂಡು, ನಿಮ್ಮ ಮುಂದಿನ ವಿದ್ಯಾಭ್ಯಾಸಕ್ಕಾಗಿ ವರ್ಗಾವಣೆ ಪತ್ರವನ್ನು ನೀಡಬೇಕೆಂದು ಕೋರುತ್ತ, ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಶಿವಮೊಗ್ಗದ ನವೋದಯ ಪ್ರೌಢಶಾಲೆಯ ವಿದ್ಯಾರ್ಥಿನಿ 'ಇಂಚರ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಸ್ವಾತಂತ್ರ್ಯ ಅಮೃತ ಮಹೋತ್ಸವ'ದ ಬಗ್ಗೆ ವಿವರಿಸಿ, ಬೆಂಗಳೂರಿನಲ್ಲಿರುವ ನಿಮ್ಮ ತಾಯಿಯವರಿಗೆ ಒಂದು ಪತ್ರವನ್ನು ಬರೆಯಿರಿ.